ಅವರವರೇ ಮುಸಿ ಮುಸಿ ನಗುತ್ತಿದ್ದರು. ಆಗೆಲ್ಲ ಮೈಯೆಲ್ಲ ಉರಿದುಹೋಗುತ್ತಿತ್ತು. ಆದರೆ, ಹಿರಿಯ ವೈದ್ಯರ ಮುಂದೆ ಅದೇ ನರ್ಸಗಳು ಊಸರವಳ್ಳಿಗಳಂತೆ ಬಾಲಮುದುರಿಕೊಂಡಿರುತ್ತಿದ್ದ ಕಾರಣ ಅವರ ಮೇಲೆ ದೂರು ಕೊಟ್ಟು ಗೆಲ್ಲುವುದು ಸುಲಭವಾಗಿರಲಿಲ್ಲ.

ರಾಮಚಂದ್ರನ್ ಕೆಲಸ ಮಾಡುವ ಕಡೆ ಅಮಂಡ ಎನ್ನುವ ತಾಟಕಿಯಂತಹ ಒಬ್ಬ ನರ್ಸ್ ಗಂಟು ಬಿದ್ದಿದ್ದಳಂತೆ. ಅವಳಿಗೆ ವಯಸ್ಸು ಅಷ್ಟೇನೂ ಆಗಿರಲಿಲ್ಲ ಅಂತ ಅವನು ಹೇಳಿದ್ದ ನೆನಪು. ಅವಳ ಅಗತ್ಯಗಳು ಏನಿದ್ದವೋ ಏನೋ. ಒಟ್ಟಿನಲ್ಲಿ ಇವನ ಇರುವು ಅವಳಿಗೆ ಸಹ್ಯವಾಗುತ್ತಿರಲಿಲ್ಲ. ಯಾವುದಾದರೂ ಇಂಗ್ಲಿಷ್ ವ್ಯಕ್ತಿ ಬಂದಿದ್ದರೆ ಅವನೊಡನೆ ಚಕ್ಕಂದ ಆಡುತ್ತ ಹರಟೆ ಹೊಡೆಯಬಹುದಿತ್ತು ಎಂದುಕೊಂಡಿದ್ದಳೋ ಏನೋ? ಒಟ್ಟಿನಲ್ಲಿ ಇವನನ್ನು ಕಂಡರೆ ತಾತ್ಸಾರ.

ರಾಮಚಂದ್ರನ್‌ನನ್ನು ಕೆಲಸದ ನಡುವೆ ಯಾರು ಮಾತನಾಡಿಸಿದರೂ ಸೈನಿಕನ ಶಿಸ್ತಿನಲ್ಲಿ ವೃತ್ತಿಯ ಬಗ್ಗೆ ಮಾತ್ರ ಮಾತಾಡುತ್ತಿದ್ದನೇ ಹೊರತು ಅವನಲ್ಲಿ ಮಿಕ್ಕ ಯಾವ ಪ್ರಪಂಚವೂ ಇರಲಿಲ್ಲ. ಅಮಂಡಳಿಗೆ ಇವನು ಯಾವುದೋ ಗ್ರಹದ ನಿರ್ಲಿಂಗ ಜೀವಿಯಂತೆ ಕಾಣತೊಡಗಿದನೇನೋ? ಒಟ್ಟಿನಲ್ಲಿ ಅವನ ಬಗ್ಗೆ ಸುಳ್ಳು ಸುಳ್ಳೇ ವರದಿಕೊಡತೊಡಗಿದ್ದಳು. "ನೀನು ನನ್ನ ಅಕ್ಕನಂತೆ, ತಾಯಿಯಂತೆ, ನೀನೇ ದೊಡ್ಡ ವ್ಯಕ್ತಿ" ಎನ್ನುವಂತೆ ಇವನು ಶರಣಾಗತಿ ತೋರಿದರೂ ಇವನಿಗೆ ಕಿರಿ ಕಿರಿ ಮಾಡುವುದೇ ಅವಳ ದೈನಂದಿನ ಕೆಲಸವಾಗತೊಡಗಿತ್ತು.

ಒಂದಷ್ಟು ಸಮಯದ ನಂತರ ರಾಮಚಂದ್ರನ್‌ಗೂ ಸಹನೆಯ ಕಟ್ಟೆಯೊಡೆಯತೊಡಗಿ ಅವಳನ್ನು ಉಪಾಯವಾಗಿ ದೂರವಿಡತೊಡಗಿದ. ಅವಳ ಇರುವನ್ನ, ಕಿರಿ ಕಿರಿಯನ್ನ, ನಿರ್ಲಕ್ಷಿಸತೊಡಗಿದ. ಅವಳು ಆಡುತ್ತಿದ್ದ ಕಟಕಿಗಳಿಗೆ ಕಿವುಡನಂತೆ ವರ್ತಿಸತೊಡಗಿದ. ಆದರೆ, ಇಂಗ್ಲೆಂಡಿನ ನರ್ಸುಗಳನ್ನು ಭಾರತದಲ್ಲಿ ನಡೆಸಿಕೊಂಡಂತೆ ನಡೆಸಿಕೊಳ್ಳುವುದು ಸಾಧ್ಯವೇ ಇರಲಿಲ್ಲ. ಜೋರು ಮಾಡಲು, ಅಪ್ಪಣೆ ಕೊಡಲು ಸಾಧ್ಯವೇ ಇರಲಿಲ್ಲ. ಅಷ್ಟಕ್ಕೂ ಇವನೇನು ಅವರಿಗೆ ಕೆಲಸ ಕೊಟ್ಟ ಬಾಸ್ ಆಗಿರಲಿಲ್ಲವಲ್ಲ? ನರ್ಸುಗಳ ಬಾಯಿ ಜೋರಾದರೆ ಅವನ ವೈದ್ಯ ವೃತ್ತಿಗೇ ಮಸಿ ಬಳಿದುಕೊಳ್ಳುತ್ತಿತ್ತು. ಎಷ್ಟಾದರೂ ಇದು ಅವರ ದೇಶ. ನ್ಯಾಯ ಅವರೆಡೆಗೆ ವಾಲುವ ಸಾಧ್ಯತೆಗಳೇ ಜಾಸ್ತಿ ಅಂತ ಬಹಳ ಸಂಯಮದಿಂದ ನಡೆದುಕೊಳ್ಳುತ್ತಿದ್ದ.

ಒಂದು ದಿನ ರಾಮಚಂದ್ರನ್ ರಾತ್ರಿ ಪಾಳಿಯಲ್ಲಿದ್ದ. ಅವತ್ತು ಆಕ್ಸಿಡೆಂಟ್ ಮತ್ತು ಎಮರ್ಜೆನ್ಸಿ ವಿಭಾಗ ಯಾವುದೋ ಅಪಘಾತದ ಕಾರಣ ಹಲವು ಜರ್ಜರಿತ ರೋಗಿಗಳನ್ನು ನೋಡಬೇಕಾಯಿತು. ಸರ್ಜರಿಯ ಕಿರಿಯ ವೈದ್ಯನಾಗಿದ್ದ ರಾಮಚಂದ್ರನ್ ಸಿಕ್ಕಾಪಟ್ಟೆ ಕೆಲಸದಲ್ಲಿ ಸಿಕ್ಕಿಕೊಂಡಿದ್ದ. ರಾತ್ರಿಯೆಲ್ಲ ಎಡೆಯಿಡದೆ ಕೆಲಸಮಾಡಿದ್ದ. ಬೆಳಗಾಗುವುದರಲ್ಲಿ ಊಟ, ನಿದ್ದೆ, ನೀರು ಯಾವುದೂ ಇಲ್ಲದೆ ನಿತ್ರಾಣನಾಗಿದ್ದ. ಆದರೆ, ಮರುದಿನದ ಮತ್ತೂ ಅರ್ಧದಿನದ ಕೆಲಸ ಮುಗಿಸದೆ ಮನೆಗೆ ಹೋಗುವಂತಿರಲಿಲ್ಲ. ಅಷ್ಟರಲ್ಲಾಗಲೇ ಸೀನಿಯರ್‌ಗಳು ಬಂದು ಸರ್ಜರಿಗಳನ್ನು ಮಾಡುವಲ್ಲಿ ಬ್ಯುಸಿಯಾಗಿದ್ದರು. ಹಾಗಾಗಿ ಮರುದಿನ ಬೆಳಗ್ಗೆ ಇವನು ವಾರ್ಡಿನಲ್ಲಿದ್ದ ರೋಗಿಗಳನ್ನೆಲ್ಲ ನೋಡಬೇಕಿತ್ತು.

ವಾರ್ಡಿನಲ್ಲಿ ಇವನು ಒಬ್ಬ ರೋಗಿಯ ಪರೀಕ್ಷೆ ಮಾಡುತ್ತಿದ್ದಾಗ ಅಮಂಡ ಟಕ್ ಟಕ್ ಎಂದು ನಡೆದುಕೊಂಡು ಬಂದು, "ರಾಂ, ಕ್ಯನ್ ಯು ಕಮ್ ಫಾರ್ ಎ ಮಿನಿಟ್ ಪ್ಲೀಸ್?" ಅಂತ ದರ್ಪದಿಂದ ಕರೆದುಹೋದಳು. ಅಲ್ಲಿ 'ಪ್ಲೀಸ್' ಎನ್ನುವುದು ಕಾಟಾಚಾರಕ್ಕಷ್ಟೆ. ಅದೊಂದು ರೀತಿಯ ಆಜ್ಞೆಯಾಗಿತ್ತು. ಆ ರೋಗಿಯ ಪರೀಕ್ಷೆ ಇನ್ನೇನು ಮುಗಿಯುತ್ತಿದ್ದ ಕಾರಣ, ಇವನು ತಲೆಯಾಡಿಸಿದ. ಇವನು ಪರೀಕ್ಷಿಸುತ್ತಿದ್ದ ರೋಗಿ ಮತ್ತೆ ನಿದ್ರೆಗೆ ಜಾರುವುದರಲ್ಲಿದ್ದ. ವಾರ್ಡಿನಲ್ಲಿದ್ದ ಇನ್ನೂ ಹಲವು ರೋಗಿಗಳು ರಾತ್ರಿಯ ನಿದ್ರೆ ಮುಗಿಸಿರಲಿಲ್ಲ.